# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್ ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1187** |
| ಉತ್ತರಿಸಬೇಕಾದ ದಿನಾಂಕ | : | 30.09.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಯೋಜನೆಗಳ ಮೂಲಕ ಬಡವರಿಗೆ ಮನೆಗಳನ್ನು ಹಂಚುವ ಕಾರ್ಯಕ್ರಮ ರೂಪಿಸಲಾಗಿದೆ. (ವಿವರ ನೀಡುವುದು) | ಪ್ರಸ್ತುತ ಬಸವ ವಸತಿ ಯೋಜನೆ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ, ದೇವರಾಜು ಅರಸು ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳಲ್ಲಿ 2020-21ನೇ ಸಾಲಿಗೆ ಗುರಿ ನೀಡಿರುವುದಿಲ್ಲ. ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ 2020-21 ನೇ ಸಾಲಿಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ 1,51,715 ಮನೆಗಳ ಗುರಿಯನ್ನು ನೀಡಲಾಗಿದೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ದಡಿ ಕೇಂದ್ರ ಸರ್ಕಾರದ ಅನುದಾನ ರೂ.1.50 ಲಕ್ಷಗಳ ಸಹಾಯಧನ ಪಡೆಯಲು ಸ್ಥಳೀಯ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ, ಅನುಮೋದನೆಗೆ ಪರಿಗಣಿಸಲಾಗುವುದು ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ದಡಿ ಗುರಿ ಮಿತಿ ಇರುವುದಿಲ್ಲ. |
| (ಆ) | ಕಳೆದ ಎರಡು ವರ್ಷಗಳಿಂದ ನಿರ್ಮಾಣವಾಗದೇ ಉಳಿದಿರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಅಂತಿಮ ಗಡುವು ನಿಗಧಿಪಡಿಸಿದೆಯೇ. | ಬಸವ ವಸತಿ ಯೋಜನೆ, ಡಾ\|\|ಬಿ.ಆರ್.ಅಂಬೇಡ್ಕರ್, ವಾಜಪೇಯಿ ಮತ್ತು ಇತರೆ ವಸತಿ ಯೋಜನೆಯಡಿಯಲ್ಲಿ ನಿಗಧಿತ ಅವಧಿಯಲ್ಲಿ ಪ್ರಾರಂಭಗೊಳ್ಳದ ಮನೆಗಳನ್ನು ಬ್ಲಾಕ್ ಮಾಡಲಾಗಿರುತ್ತದೆ. ಜನಪ್ರತಿನಿಧಿಗಳ ಕೋರಿಕೆ ಮೇರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಬ್ಲಾಕ್ ಮಾಡಲಾದ 255960 ಮನೆಗಳನ್ನು ಅನ್ ಬ್ಲಾಕ್ ಮಾಡಿ, ಒಂದೂವರೆ ತಿಂಗಳ ಕಾಲವಾಕಾಶ ನೀಡಲಾಗಿರುತ್ತದೆ. ಈ ಅವಧಿಯಲ್ಲಿ ಪ್ರಾರಂಭಗೊಂಡು ಜಿ.ಪಿ.ಎಸ್ ಅಳವಡಿಸಿದ 64390 ಮನೆಗಳನ್ನು ಹೊರತು ಪಡಿಸಿ ಉಳಿದ 191570 ಮನೆಗಳನ್ನು ಪುನಃ ಬ್ಲಾಕ್ ಮಾಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ವಇ 12 ಹೆಚ್ಎಹೆಚ್ 2020, ದಿನಾಂಕ:19.05.2020 ರನ್ವಯ ವಿವಿಧ ವಸತಿ ಯೋಜನೆಗಳಡಿಯಲ್ಲಿ ಆಯ್ಕೆಯಾಗದ ಮತ್ತು ಆಯ್ಕೆಯಾಗಿ ವಿವಿಧ ಲಾಗಿನ್ ಹಂತದಲ್ಲಿರುವ ಹಾಗೂ ನಿಗದಿತ ಸಮಯದೊಳಗೆ ಮನೆ ಪ್ರಾರಂಭ ಮಾಡಿಕೊಳ್ಳದೇ ಬ್ಲಾಕ್ ಮಾಡಲಾದ ಒಟ್ಟು 381370 ಮನೆಗಳನ್ನು ಹಿಂಪಡೆಯಲಾಗಿದೆ. |
| (ಇ) | ವಸತಿ ಇಲಾಖೆಯಡಿ ನಿರ್ಮಾಣವಾಗುವ ಮನೆಗಳ ಗುಣ ಮಟ್ಟದ ಕುರಿತು | ಇಲ್ಲ.<br><br>ಎ.ಹೆಚ್.ಪಿ ಘಟಕದಡಿ ಮನೆಗಳ ಗುಣ ಮಟ್ಟ ಕುರಿತು |

| | | |
|---|---|---|
| | ಪ್ರಶ್ನೆಗಳು ಎದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದೂರುಗಳು ಬಂದಿರುವುದಿಲ್ಲ. ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳಡಿ ಸರ್ಕಾರದ ಸಹಾಯಧನ ಪಡೆದು ಫಲಾನುಭವಿಗಳೇ ಸ್ವತ: ಗುಣ ಮಟ್ಟದ ಮನೆಗಳನ್ನು ನಿರ್ಮಿಸಿ ಕೊಳ್ಳುತ್ತಿದ್ದಾರೆ. |
| ಈ) | ಕಳಪೆ ಗುಣ ಮಟ್ಟದ ಮನೆಗಳನ್ನು ನಿರ್ಮಿಸಿದರೆ ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ? | |

ಸಂಖ್ಯೆ :ವಇ 339 ಹೆಚ್‌ಎಂ 2020

**(ವಿ. ಸೋಮಣ್ಣ)**
ವಸತಿ ಸಚಿವರು.